# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ಕಾರ್ಯಾಲಯ, ಯಾದಗಿರಿ.

**ಅಧಿಸೂಚನೆ ಸಂಖ್ಯೆ : ಎಡಿಎಂಎನ್ : 1 : 2018, ದಿನಾಂಕ : 14.12.2018.**

ವಿಷಯ : ಶೀಘ್ರಲಿಪಿಗಾರ ಹುದ್ದೆಗಳ ನೇರ ನೇಮಕಾತಿ ಕುರಿತು.

ಉಲ್ಲೇಖ : 1) ಸರ್ಕಾರಿ ಆದೇಶ ಸಂ : ಲಾ 230 ಎಲ್‌ಸಿಇ 2010, ದಿನಾಂಕ : 29.03.2011 ರಾಜ್ಯದ ಅಧೀನ ನ್ಯಾಯಾಲಯಗಳಿಗೆ 309 ಶೀಘ್ರಲಿಪಿಗಾರರ ಹುದ್ದೆಗಳನ್ನು ಸೃಜಿಸುವ ಬಗ್ಗೆ.

2) ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರದ ಸಂಖ್ಯೆ : ಎಲ್‌ಸಿಎ – II 36 : 2003 ದಿನಾಂಕ : 23.06.2011 ಶೀಘ್ರಲಿಪಿಗಾರರ ಹುದ್ದೆಗಳನ್ನು ವಿವಿಧ ನ್ಯಾಯಾಲಯಗಳಿಗೆ ಹಂಚಿಕೆ ಕುರಿತು ಸ್ವಾಯತ್ತತೆ ನೀಡಿದ ಬಗ್ಗೆ.

3) ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರದ ಸಂಖ್ಯೆ : ಎಲ್‌ಸಿಎ – II 36 : 2003 ದಿನಾಂಕ : 24.10.2011 ಶೀಘ್ರಲಿಪಿಗಾರರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಿದ ಬಗ್ಗೆ.

4) ಕರ್ನಾಟಕ ಸರ್ಕಾರದ ಆದೇಶ ಸಂ : ಲಾ 112 ಎಲ್‌ಸಿಇ 2012, ಬೆಂಗಳೂರು, ದಿ : 28.12.2012.

5) ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳ) ( ನೇಮಕಾತಿ ) ನಿಯಮ 1982 ( ತಿದ್ದುಪಡಿ ) ನಿಯಮ 2007.

6) ಕರ್ನಾಟಕ ನಾಗರಿಕ ಸೇವಾ ಸಾಮಾನ್ಯ ನೇಮಕಾತಿ ನಿಯಮ – 1977.

7) ಕಚೇರಿ ಟಿಪ್ಪಣಿ ದಿ : 14.12.2018 ಮಾಡಿದ ಆದೇಶ

*****

ಮೇಲ್ಕಂಡ ಅಧಿಸೂಚನೆಯನ್ವಯ ಯಾದಗಿರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ಅಧೀನ ನ್ಯಾಯಾಲಯಗಳಲ್ಲಿ ಖಾಲಿ ಇರುವ **11 ಶೀಘ್ರಲಿಪಿಗಾರರ** ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅಧಿಸೂಚನೆಯಲ್ಲಿ ಲಗತ್ತಿಸಿರುವ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **17.01.2019** ಸಂಜೆ **5.00** ಗಂಟೆಯೊಳಗೆ.

## I. ಶೀಘ್ರಲಿಪಿಗಾರ

1. **ಹುದ್ದೆಗಳ ಸಂಖ್ಯೆ : 09.**

ವೇತನ ಶ್ರೇಣಿ : 27650-650-29600-750-32600-850-36000-950-39800-1100-46400-1250-52650 ಹಾಗೂ ಇತರೆ ಭತ್ಯೆಗಳು.

**ಆಯ್ಕೆಯ ವಿಧಾನ :**

1) ಕರ್ನಾಟಕ ಅಧೀನ ನ್ಯಾಯಾಲಯಗಳ ( ಮಿನಿಸ್ಟಿರಿಯಲ್ ಮತ್ತು ಇತರ ಹುದ್ದೆಗಳು ) ( ನೇಮಕಾತಿ ) ನಿಯಮಗಳು 1982 ಮತ್ತು ( ತಿದ್ದುಪಡಿ ) ನಿಯಮಗಳು 2007ರನ್ವಯ ನೇರ ನೇಮಕಾತಿ ಮೂಲಕ ಆಯ್ಕೆ ಮಾಡಲಾಗುವುದು.

2) ಶೀಘ್ರಲಿಪಿಗಾರರ ಹುದ್ದೆಗೆ ಒಂದು ನಿಮಿಷಕ್ಕೆ 120 ಶಬ್ದಗಳಂತೆ ಸುಮಾರು 5 ನಿಮಿಷ ಉಕ್ತಲೇಖನವನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ನೀಡಲಾಗುವುದು ಅದನ್ನು 45 ನಿಮಿಷಗಳೊಳಗಾಗಿ ಲಿಪ್ಯಂತರಗೊಳಿಸಿ ಬೆರಳಚ್ಚು ಮಾಡಿ ಕೊಡತಕ್ಕದ್ದು. ಇದಕ್ಕೆ 100 ಅಂಕಗಳು ನಿಗದಿಪಡಿಸಲಾಗಿದೆ.

3) ಈ ಪರೀಕ್ಷೆಯಲ್ಲಿ ಗರಿಷ್ಠ 100 ಅಂಕಗಳಿದ್ದು ಪರೀಕ್ಷೆಯಲ್ಲಿ ಉತ್ತೀರ್ಣತೆಗೆ ಕನಿಷ್ಠ 50 ಅಂಕಗಳನ್ನು ಪಡೆಯಬೇಕಾಗುತ್ತದೆ.

**ಸೂಚನೆಗಳು :**

1) ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ : **17.01.2019** ರಂದು ಸಂಜೆ **5-00** ಗಂಟೆಯೊಳಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಕಡೆಯ ದಿನಾಂಕವು ಸಾರ್ವಜನಿಕ ರಜೆ ದಿನವಾಗಿದ್ದ ಪಕ್ಷದಲ್ಲಿ ಮುಂದಿನ ಕೆಲಸದ ದಿನಾಂಕ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನವಾಗಿರುತ್ತದೆ.

2) ಭರ್ತಿ ಮಾಡಿದ ಅರ್ಜಿಗಳನ್ನು ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸಬೇಕು.

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ಕಚೇರಿ, ಯಾದಗಿರಿ, ಜಿಲ್ಲೆ : ಯಾದಗಿರಿ.**

**i) ವಯೋಮಿತಿ ( ಅರ್ಜಿ ಸಲ್ಲಿಸಲು ಕೊನೆಯ ದಿನಾಂಕಕ್ಕೆ ಅನುಗುಣವಾಗಿ ) :**

| | | | | |
|---|---|---|---|---|
| **ಕನಿಷ್ಠ ವಯೋಮಿತಿ** | : | 18 ವರ್ಷ ತುಂಬಿರಬೇಕು | | |
| **ಗರಿಷ್ಠ ವಯೋಮಿತಿ** | : | ಸಾಮಾನ್ಯ ವರ್ಗ | - | 35 ವರ್ಷ |
| | | 2ಎ/2ಬಿ/3ಎ/3ಬಿ | - | 38 ವರ್ಷ |
| | | ಪ.ಜಾ/ಪ.ಪಂ/ಪ್ರ.ವರ್ಗ-1 | - | 40 ವರ್ಷ |

ಸರ್ಕಾರಿ ಸೇವೆಯಲ್ಲಿರುವವರಿಗೆ, ವಿಧವೆಯರಿಗೆ, ಮಾಜಿ ಸೈನಿಕರಿಗೆ ಹಾಗೂ ಅಂಗವಿಕಲರಿಗೆ ನಿಯಮಾನುಸಾರ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು.

